# ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ

ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಕರ್ನಾಟಕ ಸರ್ಕಾರ

'ವಿಜ್ಞಾನ ಭವನ', 24/2, 3ನೇ ಮಹಡಿ, 21ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು 560070.

ದೂರವಾಣಿ: 080-26711166; ಇಮೇಲ್: ksteps.dst@gmail.com


ಸಂ: DST/KSTePS/Ph.D. Fellowship/**LIF-13:2021-22**/1014/2 ದಿನಾಂಕ: ನವೆಂಬರ್ 06, 2021

ಗೆ:

ಅದಿತಿ ಜಿ.
ಜೈವಿಕ ತಂತ್ರಜ್ಞಾನ ವಿಭಾಗ,
ಮೈಸೂರು ವಿಶ್ವವಿದ್ಯಾಲಯ
ಮಾನಸ ಗಂಗೋತ್ರಿ, ಮೈಸೂರು-570005

Scan

## ಶಿಷ್ಯವೇತನ ಪ್ರದಾನ ಪತ್ರ

ಪ್ರಿಯ ವಿದ್ಯಾರ್ಥಿ,

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ 2021-22 ನೇ ಸಾಲಿನ **ಕರ್ನಾಟಕ ಡಿ.ಎಸ್.ಟಿ.-ಪಿಹೆಚ್.ಡಿ. ಶಿಷ್ಯವೇತನ** ಯೋಜನೆಯಡಿ ಶಿಷ್ಯವೇತನ ಪಡೆಯಲು ತಾವು ಆಯ್ಕೆಯಾಗಿರುತ್ತೀರಿ ಎಂದು ತಿಳಿಸಲು ಹರ್ಷಿಸುತ್ತೇನೆ.

ಸದರಿ ಯೋಜನೆಯಡಿ ಮಾಸಿಕ ರೂ. 20,000/- ಶಿಷ್ಯವೇತನವನ್ನು **ಡಿಸೆಂಬರ್ 01, 2021** ರಿಂದ ಅನ್ವಯವಾಗುವಂತೆ ನೀಡಲಾಗುವುದು. ಅಲ್ಲದೇ, ಈ ಶಿಷ್ಯವೇತನವು ಪ್ರಾರಂಭಿಕವಾಗಿ ಒಂದು ವರ್ಷದ ಅವಧಿಯದ್ದಾಗಿದ್ದು, ಇದನ್ನು ಮುಂದಿನ ಅವಧಿಗೆ ವಿಸ್ತರಿಸುವ ವಿವೇಚನೆಯು ಕೆಸ್ಟೆಪ್ಸ್, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯದ್ದಾಗಿರುತ್ತದೆ.

ಈ ಪತ್ರದೊಂದಿಗೆ ಕರ್ನಾಟಕ ಡಿ.ಎಸ್.ಟಿ.-ಪಿಹೆಚ್.ಡಿ. ಶಿಷ್ಯವೇತನ ಯೋಜನೆಯ ಮಾರ್ಗಸೂಚಿ ಹಾಗೂ ನಿಯಮ ಮತ್ತು ನಿಬಂಧನೆಗಳನ್ನು (General Guidelines and Terms and Conditions) ಲಗತ್ತಿಸಲಾಗಿದ್ದು, ತಾವು ಎಲ್ಲಾ ನಿಬಂಧನೆಗಳಿಗೆ ಒಪ್ಪಿದ್ದಲ್ಲಿ ಈ ಕೆಳಕಂಡ ದಾಖಲೆಗಳನ್ನು ಕೆಸ್ಟೆಪ್ಸ್ ಸಂಸ್ಥೆಗೆ **ಡಿಸೆಂಬರ್ 15, 2021** ರೊಳಗಾಗಿ ಸಲ್ಲಿಸುವ ಮೂಲಕ ಶಿಷ್ಯವೇತನ ಯೋಜನೆಯಡಿ ದಾಖಲಾಗಬಹುದಾಗಿರುತ್ತದೆ:

**ಅ)** ವಿಸ್ತೃತ ಪ್ರಸ್ತಾವನೆ ಹಾಗೂ ಸಂಶೋಧನಾ ಮಾರ್ಗದರ್ಶಕರು ಮತ್ತು ಸಂಸ್ಥೆಯ ಮುಖ್ಯಸ್ಥರಿಂದ ಪ್ರಮಾಣ ಪತ್ರಗಳು (Detailed proposal format along with certificate from research supervisor and Head of the Institution)- ಮಾರ್ಗಸೂಚಿಯಲ್ಲಿನ **ಅನುಬಂಧ A, B ಮತ್ತು C**

**ಆ)** Undertaking letter ಮತ್ತು ಬ್ಯಾಂಕ್ ಖಾತೆಯ ವಿವರ (ಮಾರ್ಗಸೂಚಿಯಲ್ಲಿನ **ಅನುಬಂಧ-I ಮತ್ತು II**).

**ಇ)** ಷೆಡ್ಯೂಲ್-'ಸಿ' ನಮೂನೆ (Schedule- 'C' Form) (ಮಾರ್ಗಸೂಚಿಯಲ್ಲಿನ **ಅನುಬಂಧ -VII**)

**ಮೇಲ್ಕಂಡ ಎಲ್ಲಾ ದಾಖಲೆಗಳನ್ನು ಡಿಸೆಂಬರ್ 15, 2021 ರೊಳಗೆ ಸಲ್ಲಿಸದಿದ್ದಲ್ಲಿ, ತಮಗೆ ಸದರಿ ಯೋಜನೆಯಡಿ ದಾಖಲಾಗಲು ಆಸಕ್ತಿಯಿಲ್ಲವೆಂದು ಪರಿಗಣಿಸಿ, Waiting List ನಲ್ಲಿರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡಲಾಗುವುದು.**

DR(PDI)
DUG
16/12/21

ಮುಂದುವರಿದು, ರಾಜ್ಯ /ಕೇಂದ್ರ ಸರ್ಕಾರದ ಯೋಜನೆಗಳಡಿ ಅಥವಾ ಇತರೆ ಯಾವುದಾದರೂ ಸಂಸ್ಥೆಗಳಿಂದ (host institution ಒಳಗೊಂಡು) ಈಗಾಗಲೇ ಶಿಷ್ಯವೇತನವನ್ನು ಪಡೆಯುತ್ತಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಕರ್ನಾಟಕ ಡಿ.ಎಸ್.ಟಿ.-ಪಿಹೆಚ್.ಡಿ. ಶಿಷ್ಯವೇತನ ಯೋಜನೆಯಡಿ ದಾಖಲಾಗಲು ತಾವು ಪ್ರಸ್ತುತ ಪಡೆಯುತ್ತಿರುವ ಶಿಷ್ಯವೇತನ ಯೋಜನೆಯಿಂದ ಹೊರಬರಬೇಕಾಗುತ್ತದೆ. ಅಲ್ಲದೇ, ಶಿಷ್ಯವೇತನ ಯೋಜನೆಯಿಂದ ಹೊರಬಂದ ಕುರಿತು ಸೂಕ್ತ ದಾಖಲೆಯನ್ನು ಸಕ್ಷಮ ಪ್ರಾಧಿಕಾರದ ಮೂಲಕ ಕೆಸ್ಟೆಪ್ಸ್ ಗೆ ಸಲ್ಲಿಸಲು ಸೂಚಿಸಿದೆ. ಕರ್ನಾಟಕ ಡಿ.ಎಸ್.ಟಿ.-ಪಿಹೆಚ್.ಡಿ. ಶಿಷ್ಯವೇತನದ ಜೊತೆಯಲ್ಲಿ ಇತರೆ ಶಿಷ್ಯವೇತನವನ್ನು ಪಡೆಯುವ ವಿದ್ಯಾರ್ಥಿಗಳ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸಲಾಗುವುದು.

**ಕರ್ನಾಟಕ ಡಿ.ಎಸ್.ಟಿ.-ಪಿಹೆಚ್.ಡಿ. ಶಿಷ್ಯವೇತನವು ಕೆಸ್ಟೆಪ್ಸ್ / ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ ದ ವತಿಯಿಂದ ತದನಂತರದಲ್ಲಿ ಉದ್ಯೋಗದ ಯಾವುದೇ ಭರವಸೆ ಅಥವಾ ಖಾತ್ರಿಯನ್ನು ನೀಡುವುದಿಲ್ಲ.**

ಈ ಸಂಬಂಧ, ಹೆಚ್ಚಿನ ಮಾಹಿತಿಗಾಗಿ ಡಾ|| ರೋಹಿತ್ ಕುಮಾರ್ ಹೆಚ್. ಜಿ., ವಿಜ್ಞಾನಿ-ಎಸ್.ಡಿ., ಕೆಸ್ಟೆಪ್ಸ್ ರವರನ್ನು ಸಂಪರ್ಕಿಸಬಹುದು (ದೂರವಾಣಿ: 080-26711166/9620496302 Email: dstphdfellowship@gmail.com).

ಶುಭಾಶಯಗಳೊಂದಿಗೆ,

**ವ್ಯವಸ್ಥಾಪಕ ನಿರ್ದೇಶಕರು, ಕೆಸ್ಟೆಪ್ಸ್**

**ಪ್ರತಿ:**

1. ಕುಲಸಚಿವರು, ಮೈಸೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-570005
2. ಮುಖ್ಯಸ್ಥರು, ಜೈವಿಕ ತಂತ್ರಜ್ಞಾನ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-570005.
3. ಮಾರ್ಗದರ್ಶಕರು: ಪ್ರೊ. ಎಂ.ವೈ. ಶ್ರೀನಿವಾಸ, ಪ್ರಾಧ್ಯಾಪಕರು, ಸೂಕ್ಷ್ಮ ಜೀವಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-570005
4. ಕಛೇರಿ ಪ್ರತಿ